<u>ದಿಃ 21-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

**ಪಾಟಿ ಸವಾಲುಃ ಶ್ರೀ ಎಸ್ ಕೆ ಪಿ. ವಕೀಲರಿಂದ ವಕೀಲರಿಂದಃ**

ಈ ದಾವೆಯನ್ನು ವಾದಿ 1ನೇ ಪ್ರತಿವಾದಿಯ ವಿರುದ್ದ ದಾಖಲಿಸಿರುತ್ತಾರೆ. ದಾರಿಯ ಮೇಲೆ ಆವರಣ ಗೋಡೆ ಕಟ್ಟಿದ್ದರಿಂದ ಈ ದಾವೆ ದಾಖಲಿಸಿರುತ್ತಾರೆ. ದಾ.ಸಂ. 167/1982 ದಾವೆಯನ್ನು ಸಂತೋಷಕುಮಾರ ಇವರು ಈ ದಾವೆಯ ಪ್ರತಿವಾದಿಯರ ವಿರುದ್ದ ಸಲ್ಲಿಸಿದ್ದರು. ನಾನು ದಾ.ಸಂ. 167/1982 ರ ದಾಖಲಾತಿಗಳನ್ನು ನೋಡಿರುವುದಿಲ್ಲ. ಸಾಕ್ಷಿ ಪುನಃ ಸದರಿ ದಾವೆಯನ್ನು ರಾಮಲಾಲ ದೀಕ್ಷಿತ್ ಎನ್ನುವವರು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಅವರು ಕೆಇಬಿ ಅವರ ವಿರುದ್ದ ಸದರಿ ದಾವೆಯನ್ನು ಸಲ್ಲಿಸಿದ್ದರು. ಕೆಇಬಿ ಅವರ ವಿರುದ್ದ ವಿದ್ಯುತ್ ಕಂಬಗಳನ್ನು ಹಾಕಬಾರದು ಎಂದು ದಾವೆ ಸಲ್ಲಿಸಲಾಗಿತ್ತು. ಸದರಿ ದಾವೆ ವಜಾಗೊಂಡಿರುತ್ತದೆ. ಈ ದಾವೆಯ ದಾವಾ ಆಸ್ತಿ ದಾ.ಸಂ. 167/1982 ಕ್ಕೆ ಸಂಬಂಧಿಸಿದ್ದು ಇರುತ್ತದೆ. ದಾ.ಸಂ. 167/1982 ದಾವೆಯ ದಾವಾ ಆಸ್ತಿಗೂ ಹಾಗೂ ಈ ದಾವೆಯ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದ ಆಸ್ತಿ ಸರ್ಕಾರಿ ಭೂಮಿ ಆಗಿದ್ದು ಅದರ ಸ.ನಂ. 254/1 ಎಂದು ಇರುತ್ತದೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಸ.ನಂ. 154/1 ಇದು ಸರ್ಕಾರದ ಜಮೀನು ಆಗಿರುತ್ತದೆ. ಅದರ ಕ್ಷೇತ್ರ ನನಗೆ ಹೇಳಲಾಗುವುದಿಲ್ಲ. ಸದರಿ ಆಸ್ತಿಯ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದು ನನಗೆ ಗೊತ್ತಿಲ್ಲ. ನನ್ನ ಊರು ಯರಮರಸ್ ದಂಡು ಇರುತ್ತದೆ. ವಾದಿ ವಾಸವಿರುವ ಮನೆ ಯರಮರಸ್ ದಂಡನಲ್ಲಿರುತ್ತದೆ. ವಾದಿಯ ತಂದೆಯ ಹೆಸರು ಆರ್ಯಮುನಿ ದೀಕ್ಷಿತ್ ಎಂದು ಇರುತ್ತದೆ. ಅವರ ಅಜ್ಜನ ಹೆಸರು ರಾಮಲಾಲ ದೀಕ್ಷಿತ್ ಎಂದು ಇರುತ್ತದೆ. ವಾದಿಯ ಕುಟುಂಬಕ್ಕೆ ದಾವಾ ಆಸ್ತಿ ಬಂದ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ರಾಮಲಾಲ ದೀಕ್ಷಿತ್ ಇವರ ತಂದೆಯ ಹೆಸರು ರಾಮ ಸ್ವರೂಪ ದೀಕ್ಷಿತ್ ಎಂದು ಇತ್ತು. ರಾಮ ಸ್ವರೂಪ ದೀಕ್ಷಿತ್ ಮತ್ತು ರಾಮಲಾಲ ದೀಕ್ಷಿತ್ ಅವರು ಯಾವಾಗ ತೀರಿಕೋಂಡರು ಎಂದು ನನಗೆ ಹೇಳಲಾಗುವುದಿಲ್ಲ. ರಾಮ ಸ್ವರೂಪ ದೀಕ್ಷಿತ್ ಇವರ ಜೀವಿತಾವಧಿಯಿಂದಲೂ ವಾದಿಯ ಕುಟುಂಬ ಯರಮರಸ ದಂಡು ಇಲ್ಲಿ ವಾಸವಿದ್ದಾರೆ. ರಾಮ ಸ್ವರೂಪ

ದೀಕ್ಷಿತ್‌ಇವರು ದಾವಾ ಆಸ್ತಿಯನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ರಾಮ ಸ್ವರೂಪ ದೀಕ್ಷಿತ್ ಇವರು ಸುಮಾರು 100 ವರ್ಷಗಳಿಂದ ದಾವಾ ಆಸ್ತಿಯಲ್ಲಿ ವಾಸವಿದ್ದ್ರೆ ಎಂದರೆ ನಿಜ. ಯರಮರಸ ದಂಡುನಲ್ಲಿ ಶಾಲೆ, ಸಮುದಾಯ ಭವನ ಇದೆ ಎಂದರೆ ನಿಜ. ಯರಮರಸ ದಂಡು ಪ್ರದೇಶ ಸರ್ಕಾರಿ ಸ್ವಾಮ್ಯದ ಆಸ್ತಿಯಲ್ಲ, ಅದು ಗ್ರಾಮ ವ್ಯಾಪ್ತಿಗೆ ಒಳಪಡುವ ಪ್ರದೇಶ ಎಂದರೆ ಸರಿಯಲ್ಲ.

ಯರಮರಸ ದಂಡು ಪ್ರದೇಶದಲ್ಲಿ ಇರುವ ಮನೆಗಳಿಗೆ ಮುನಿಸಿಪಾಲಿಟಿ ಅವರು ಮನೆ ನಂಬರಗಳನ್ನು ನೀಡಿರುತ್ತಾರೆ. ಆ ರೀತಿ 1998 ರಿಂದ ನಂಬರಗಳನ್ನು ನೀಡಿರುತ್ತಾರೆ. 1998 ಕ್ಕಿಂತ ಮುಂಚೆ ಪಂಚಾಯತಿ ನಂಬರಗಳನ್ನು ಸದರಿ ಮನೆಗಳಿಗೆ ನೀಡಲಾಗಿತ್ತು ಎಂದರೆ ನಿಜ. ಯರಮರಸ ದಂಡು ಪ್ರದೇಶದಲ್ಲಿ ಸುಮಾರು 500 ಜನ ವಾಸವಿದ್ದಾರ್ಷ. ಅಲ್ಲಿ ಸುಮಾರು 300 ವಾಸದ ಮನೆಗಳಿವೆ. ವಾದಿಯರ ಮನೆಯ ನಂಬರ 324 ಮತ್ತು 325 ಎಂದು ಇರುತ್ತದೆ. 1ನೇ ಪ್ರತಿವಾದಿಯ ಮನೆಯ ನಂಬರ ನನಗೆ ಗೊತ್ತಿಲ್ಲ. ವಾದಿಯರ ಮತ್ತು 1ನೇ ಪ್ರತಿವಾದಿಯ ಮನೆಯ ಮಧ್ಯ 200 ಅಡಿ ಅಂತರ ಇದೆ.

ವಾದಿಯ ಮನೆಯ ಪೂರ್ವಕ್ಕೆ 1ನೇ ಪ್ರತಿವಾದಿಯ ಮನೆ ಇದೆ. ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ಕಾರಿ ಜಮೀನು ಮತ್ತು ದಕ್ಷಿಣಕ್ಕೆ ಮಖಬೂಲ ಎನ್ನುವವರ ಮನೆ ಇದೆ. ವಾದಿಯರ ಅಣ್ಣ-ತಮ್ಮಂದಿರ ಮನೆಗಳು ವಾದಿಯ ಮನೆಯ ದಕ್ಷಿಣ ದಿಕ್ಕಿನಲ್ಲಿ ಇವೆ. ವಾದಿ ಮತ್ತು ಅವರ ಅಣ್ಣ-ತಮ್ಮಂದಿರರಿಗೆ ಸ್ವಂತ ಜಮೀನುಗಳು ಇರುವುದಿಲ್ಲ. ಸರ್ಕಾರಿ ಜಮೀನನ್ನು ಅವರು ಸಾಗುವಳಿ ಮಾಡುತ್ತಿದ್ದಾರೆ.

ನಾನು ಮುಂಚೆ ವಾದಿಯರ ಮನೆಯಲ್ಲಿ ಕೆಲಸ ಮಾಡುತಿದ್ದೆ ಎಂದರೆ ಸರಿಯಲ್ಲ. ವಾದಿ ತನ್ನ ಮನೆಯ ಸುತ್ತ-ಮುತ್ತಲೂ ಆವರಣ ಗೋಡೆ ಕಟ್ಟಿಕೊಂಡಿದ್ದಾರೆ. ವಾದಿ ನಗರಸಭೆಯ ಪರವಾನಿಗೆ ಪಡೆದು ಆವರಣ ಗೋಡೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ-9 ವಾದಿಗೆ ನಗರಸಭೆಯವರು ನೀಡಿದ ಕಟ್ಟಡ ಪರವಾನಿಗೆ ಎಂದರೆ ಸಾಕ್ಷಿ ಸದರಿ ಕಟ್ಟಡ ಪರವನಿಗೆ ಅವಧಿ ಮುಗಿದ ನಂತರ ಕಟ್ಟಡ ಕಟ್ಟಿರುದಾಗಿ ಹೇಳುತ್ತಾರೆ. ಕಟ್ಟಡ ಪರವಾನಿಗೆಯನ್ನು 2013-14 ರಲ್ಲಿ ನೀಡಿದ್ದರು. ಕಟ್ಟಡ ಪರವಾನಿಗೆ ಪಡೆದ 6 ತಿಂಗಳ ಒಳಗೆ ವಾದಿ ಆವರಣ ಗೋಡೆ ಕಟ್ಟಿ ಮುಗಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಮನೆಗೆ ಹೋಗುವ

ದಾರಿಯನ್ನು ವಾದಿ ಬಂದ್ ಮಾಡಿದ್ದರಿಂದ ನಾನು ತಕರಾರು ಮಾಡಿರುತ್ತೇನೆ. ವಾದಿಯ ಮನೆಯ ಹಿಂದೆ ನನ್ನ ಮನೆ ಇರುತ್ತದೆ. ನನಗಾಗಲೀ ಹಾಗೂ 1ನೇ ಪ್ರತಿವಾಗಾಗಲೀ ಸದರಿ ದಾರಿ ಸಂಬಂಧ ಇಲ್ಲ ಎಂದರೆ ಸಾಕ್ಷಿ ಅದೇ ರಸ್ತೆ ಮೂಲಕ ತಾವು ತಮ್ಮ ಮನೆಗೆ ಹೋಗುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿ ವಾದಿಯ ಸ್ವಂತ ಆಸ್ತಿ ಆಗಿದ್ದು ಅದು ಸರ್ಕಾರದ ಜಾಗ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸುಮಾರು 300 ಅಡಿ ಅಂತರದ ಮೇಲೆ ಟೆಂಪರರಿ ಶೆಡ್ ನಿರ್ಮಿಸಿಕೊಂಡಿರುತ್ತಾರೆ. ಸದರಿ ಶೆಡ್ ಹಾಕಿದ ಜಾಗ ವಾದಿಯ ಜಾಗೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಮನೆಯ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. 1ನೇ ಪ್ರತಿವಾದಿ ಸರ್ಕಾರದ ಜಮೀನಿನಲ್ಲಿ ಶೆಡ್ ಹಾಕಿಕೊಂಡು ಸ್ವಾಧೀನ ಹೊಂದಿರುತ್ತಾರೆ. ಅದರ ನಗರಸಭೆ ನಂಬರ ನನಗೆ ಹೇಳಲಾಗುವುದಿಲ್ಲ. ಶೆಡ್ನ ವಿಸ್ತೀರ್ಣ ಸುಮಾರು 20–25 ಅಡಿ ಇರಬಹುದು. ಸದರ ಶೆಡ್ ವಾದಿಗೆ ಸಂಬಂಧಿಸಿದ ಶೆಡ್ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ಸಹಾಯ ಮಾಡಲು ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಶ್ರೀ ಸಿಎ ಆರ್ ವಕೀಲರಿಂದ**

ನನ್ನ ಆಧಾರ ಕಾರ್ಡನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ. ನನ್ನದು ಸ್ವಂತ ಮನೆ ಇರುತ್ತದೆ. ಅದರ ನಂಬರ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿರುವುದಿಲ್ಲ.

ಓದಿ ಹೇಳಿ ಸಹಿಪಡೆಯಲಾಗಿದೆ

2ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆಎಂ ಎಫ್ಸಿ
ರಾಯಚೂರು.